ಸಿ-00 ಪಿ. ಎಂ.

ಅಧ್ಯಕ್ಷರು.—ನಿಯಮ ೪೫ರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

Sri B. A. Umarabba.—My dear Speaker Sir,**

ಅಧ್ಯಕ್ಷರು.—ತಾವು ಕೂಡಿ. ಮೊದಲು ಅಬ್ಸೆಂಟ್ ಆಗಿದ್ದಿರಿ. ನಿಮಗೆ ಅವಕಾಶ ಕೊಟ್ಟೆ. ಆದರೆ ಈ ರೀತಿ ಮಾತನಾಡುತ್ತಿದ್ದೀರಲ್ಲಾ,

Sri B. A. Umarabba.—What is the use ? What is the difference that the absence and the presence make here ? * *

ಅಧ್ಯಕ್ಷರು.—ನೀವು ಈ ತರಹ ಆರ್ಗ್ಯುಮೆಂಟ್ ಮಾಡಿದರೆ ಸರಿ ಹೋಗುವುದಿಲ್ಲ. ದಯವಿಟ್ಟು ಕೂಡಿ.

* * *

Mr. Speaker.—Whatever you have said is expunged.

ಶ್ರೀ ಪಟಮಕ್ಕಿ ರತ್ನಾಕರ್.—ಅವರು ಕೇಳಿದ್ದರಲ್ಲಿ ಏನು ತಪ್ಪು ಇದೆ ? ಅವರು ಗೈರು ಹಾಜರಾಗಿದ್ದಕ್ಕೂ, ಈಗ ಹಾಜರಾಗಿದ್ದಕ್ಕೂ ಏನು ವ್ಯತ್ಯಾಸ ಬಂತು, ಈ ಸಭೆಯಲ್ಲಿ ಸದಸ್ಯರಾಗಿ ಅವರು ಕೇಳುತ್ತಿದ್ದಾರೆ. ಅದರಲ್ಲಿ ಏನು ತಪ್ಪು ಇದೆ ?

ಅಧ್ಯಕ್ಷರು.—ನೀವು ಈ ರೀತಿ ಮಾಡುವುದಾದರೆ, ನಿಮ್ಮನ್ನು ಹೊರಗೆ ಹೋಗಿ ಅಂತ ಹೇಳ ಬೇಕಾಗುತ್ತದೆ. ೪೫ನೇ ನಿಯಮದಡಿಯಲ್ಲಿ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ದಯವಿಟ್ಟು ತಿಳಿದುಕೊಳ್ಳಿ. ನಿಮಗೋಸ್ಕರ ೪೫ನೇ ಕೆಳಗೆ ೨೭ ಅಂಶಗಳನ್ನು ಇಟ್ಟಿದ್ದೇನೆ ಇಂದು. ಮೊದಲು ಅವರು ಅಬ್ಸೆಂಟ್ ಇದ್ದರು. ಮತ್ತೊಮ್ಮೆ ಕರೆದಿದ್ದೇನೆ. ನಾನು ಸದಾವಕಾಶವನ್ನು ಮಾಡಿಕೊಟ್ಟರೆ ಈ ರೀತಿ ದುರುಪಯೋಗ ಮಾಡಿಕೊಳ್ಳುತ್ತೀರಿ.

ಶ್ರೀ ಪಟಮಕ್ಕಿ ರತ್ನಾಕರ್.—ನಮ್ಮ ಭಾವನೆಯನ್ನು ನೀವು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ ಏನು ಪ್ರಯೋಜನ ?

ಶ್ರೀ ಬಿ. ಎ. ಉಮರಬ್ಬ.—ನಾನು ಅಬ್ಸೆಂಟ್ ಆಗಿದ್ದರೂ ಕೇಳಬಹುದಿತ್ತಲ್ಲ.

೧೯) ಕರ್ನಾಟಕ ಪ್ರೌಢ ಶಿಕ್ಷಣ ಮಂಡಲಿಯವರಂ ಎಸ್. ಎಸ್. ಎಲ್. ಸಿ. ಕನ್ಸಾಲೀಡೇಟೆಡ್ ಮಾರ್ಕ್ಸ್‌ಕಾರ್ಡ್ ಕೊಡುವಲ್ಲಿ ವಿಳಂಬ ಮಾಡುತ್ತಿರುವುದಂ.

ಶ್ರೀ ಎಂ. ಎಸ್. ಪಾಟೀಲ್.—ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯಿಂದ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪಾಸ್ ಆದ ಮೇಲೆ ಕೊಡಬೇಕಾಗಿರುವ ಸಂಪೂರ್ಣ ಪಾಸ್ ಆಗಿರುವ ಸರ್ಟಿಫಿಕೇಟ್ ಕೋರಿ ಹಲವಾರು ವಿದ್ಯಾರ್ಥಿಗಳು (ಕನ್ಸಾಲಿಡೇಟೆಡ್ ಮಾರ್ಕ್ಸ್‌ಕಾರ್ಡ್) ಡಿ. ಡಿ. ಮುಖಾಂತರ ಹಣ ತುಂಬಿ ನಾಲ್ಕೈದು ತಿಂಗಳು ಗತಿಸಿದ್ದರೂ ಕೂಡ, ಸರ್ಟಿಫಿಕೇಟು ಸಿಗದಿರುವುದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಹಾಗೂ ನೌಕರಿಗೆ ತೊಂದರೆಯಾಗಿದೆ. ಈ ವಿಷಯದಲ್ಲಿ ಹಲವಾರು ವಿದ್ಯಾರ್ಥಿಗಳು ಸಂಪರ್ಕಿಸಿದ್ದರೂ ಕೂಡ ಇವರಿಗೆ ಯೋಗ್ಯ ನ್ಯಾಯ ದೊರಕುತ್ತಿಲ್ಲ. ಮುಖ್ಯವಾಗಿ ಬೆಳಗಾವಿ ಜಿಲ್ಲೆಯ ಹಲವಾರು ಹೈಸ್ಕೂಲುಗಳವರು ಪರೀಕ್ಷಾ ಮಂಡಲಿಗೆ ದುಡ್ಡು ಕಳುಹಿಸಿ ಸರ್ಟಿಫಿಕೇಟ್ ಕಳುಹಿಸುವಂತೆ ಹೆಡ್ ಮಾಸ್ಟರ್‌ರಿಂದ ಪತ್ರವನ್ನು ಕಳುಹಿಸಿ ಕೊಟ್ಟರೂ ಪ್ರಯೋಜನವಾಗುತ್ತಿಲ್ಲ.

ಮೈಗ್ರೇಷನ್ ಸರ್ಟಿಫಿಕೇಟ್ ಕೊಡುವುದರಲ್ಲಿಯೂ ಕೂಡ ವಿಳಂಬವಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಆದ ಕಾರಣ ಈ ವಿಷಯದಲ್ಲಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯವರು ಡಿ. ಡಿ.

** Expunged as ordered by the speaker.

ಬಂದ ಮೇಲೆ ಒಂದು ವಾರದೊಳಗಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಕನ್ಸಾಲಿಡೇಟೆಡ್ ಮಾರ್ಕ್ಸ್ ಕಾರ್ಡ್ ಹಾಗೂ ಮೈಗ್ರೇಷನ್ ಸರ್ಟಿಫಿಕೇಟ್ ಕಳುಹಿಸುವ ಕಾರ್ಯಕ್ರಮವನ್ನು ಪರಿಪಾಠದಲ್ಲಿಡುವಂತೆ ಒತ್ತಾಯಿಸುತ್ತೇನೆ. ಸಮೀಕ್ಷೆಯಾದಲ್ಲಿ ಹಾಗೂ ನೈವೇದ್ಯ ಸಮರ್ಪಣೆ ಮಾಡಿದಲ್ಲಿ ಸರ್ಟಿಫಿಕೇಟ್ ಕೂಡಲೇ ಸಿಗಂತ್ತದೆಂದು ಹಲವಾರು ವಿದ್ಯಾರ್ಥಿಗಳು ನನ್ನ ಗಮನಕ್ಕೆ ತಂದಿರುತ್ತಾರೆ. ಸತ್ಯಾಸತ್ಯತೆಯನ್ನು ಸರ್ಕಾರದಿಂದ ಪರಿಶೀಲನೆ ಮಾಡಿ, ತಪ್ಪಿತಸ್ಥರ ಮೇಲೆ ಯೋಗ್ಯ ಕ್ರಮ ಕೈಗೊಂಡು ಆಗುತ್ತಿರುವ ತೊಂದರೆಯನ್ನು ಕೂಡಲೇ ಪರಿಹರಿಸಬೇಕಾಗಿ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಾ, ಸದನದಲ್ಲಿ ಈ ಬಗ್ಗೆ ಹೇಳಿಕೆ ಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತು ಮೊದಲ ಪ್ರಯತ್ನದಲ್ಲಿಯೇ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಅವರ ತೇರ್ಗಡೆ ಪತ್ರಗಳನ್ನು ಫಲಿತಾಂಶ ಪ್ರಕಟವಾದ ಒಂದು ವಾರದೊಳಗಾಗಿ ಕಳುಹಿಸಲಾಗುತ್ತಿದೆ. ಒಂದಕ್ಕಿಂತ ಹೆಚ್ಚು ಸಲ ಪರೀಕ್ಷೆಗೆ ಕುಳಿತು ತೇರ್ಗಡೆಯಾಗುವ ಅಭ್ಯರ್ಥಿಗಳು ಪೂರ್ಣ ಮಾಹಿತಿಯನ್ನು ಕೊಡದೆ ಇರುವುದರಿಂದ ಅಂದರೆ ನೋಂದಣಿ ಸಂಖ್ಯೆ, ವರ್ಷ, ಶಾಲೆಯ ಹೆಸರು ಇತ್ಯಾದಿಗಳನ್ನು ಕೊಡದೆ ಇರುವುದರಿಂದ ಇಂಥವರ ಕ್ಯೋಢೀಕೃತ ಅರ್ಹತಾ ಪತ್ರ ಕಳುಹಿಸಲು ವಿಳಂಬವಾಗುತ್ತದೆ. ಬೆಳಗಾಂ ಜಿಲ್ಲೆಯ ಅರ್ಹತಾ ಪತ್ರಗಳ ಬಗ್ಗೆಯೂ ಈ ಮಾತು ಅನ್ವಯಿಸುತ್ತದೆ. ಮೈಗ್ರೇಷನ್ ಸರ್ಟಿಫಿಕೇಟ್‌ಗಳನ್ನು ಹೊರ ರಾಜ್ಯಗಳ ಕಾಲೇಜು ಪ್ರಾಂಶುಪಾಲರಿಂದ ಕೋರಿಕೆ ಬಂದ ನಂತರ ಅವರಿಗೆ ಕಳುಹಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ನೇರವಾಗಿ ಕಳುಹಿಸಲಾಗುವುದಿಲ್ಲ. ಆದರೂ ಈ ಬಗ್ಗೆ ಕೂಲಂಕುಷ ವಿಚಾರಣೆ ಮಾಡಿದ ಅನಾವಶ್ಯಕ ವಿಳಂಬವಾಗಿದ್ದರೆ ಸೂಕ್ತ ಕ್ರಮ ಕೈಗೊಳ್ಳಬಹುದು.

ಶ್ರೀ ಕೆ. ಬಿ. ಶ್ಯಾನಪ್ಪ.—ಆಬ್ಸೆಂಟ್.

ಶ್ರೀ ಬಿ. ಲಕ್ಕಪ್ಪ.—ಆಬ್ಸೆಂಟ್.

೨೦) ಹುಬ್ಬಳ್ಳಿ-ಧಾರವಾಡ ಮುನಿಸಿಪಾಲಿಟಿ ಕಚೇರಿಗೆ ಸಾರ್ವಜನಿಕರ ಪ್ರವೇಶದ ಬಗ್ಗೆ.

ಶ್ರೀ ಎಂ. ಎಸ್. ಹಿಂಡಸ್ಗೇರಿ.—ನಿನ್ನೆ ನನ್ನ ಪ್ರಶ್ನೆಗೊಂದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕಾಗಿತ್ತು. ಈಗ ಆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಅವರು ಉತ್ತರವನೂ ಹೇಳುವುದಕ್ಕೆ ತಯಾರಿದ್ದಾರೆ. ತಾವು ಅವರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಆಗಬಹುದು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮುನಿಸಿಪಾಲಿಟಿಯಾಗಿದ್ದಾಗ ಬೆಳಿಗ್ಗೆ ೯-೧೦ ಗಂಟೆಯಿಂದ ಸಂಜೆ ೬ ಗಂಟೆಯವರೆಗೂ ಎಲ್ಲಾ ಸಾರ್ವಜನಿಕರಿಗೆ ಕಚೇರಿಯಂ ಪ್ರವೇಶಕ್ಕೆ ಮುಕ್ತ ಅವಕಾಶ ಇದ್ದದ್ದು ನಿಜ. ಇದರಿಂದ ಆಲ್ಲಿ ಬಹಳ ತೊಂದರೆಯಾಗುತ್ತಿತ್ತು. ಈಗ ಅದು ಮಹಾನಗರಸಭೆಯಾಗಿದೆ. ಆಲ್ಲಿ ಯಾವುದೇ ಕೆಲಸಗಳಾಗುತ್ತಿರಲಿಲ್ಲ. ಆದರ ಸಲುವಾಗಿ ಕಛೇರಿ ಸಾರ್ವಜನಿಕರ ಪ್ರವೇಶವನ್ನು ನಿಷೇದಿಸಲಾಗಿದೆ. ಅಂದರೆ ಕಛೇರಿಯಲ್ಲಿ ಬೆಳಿಗ್ಗೆ ೧೦ ರಿಂದ ಮಧ್ಯಾಹ್ನ ೨ ಗಂಟೆಯವರಿಗೆ ಅಧಿಕಾರಿಗಳು ಕಛೇರಿ ಕೆಲಸವನ್ನು ಮಾಡಬೇಕೆಂತಲೂ, ಮಧ್ಯಾಹ್ನ ೨-೩೦ ಗಂಟೆಯಿಂದ ಸಂಜೆಯವರೆಗೂ ಸಾರ್ವಜನಿಕರು ಆ ಅಧಿಕಾರಿಗಳನ್ನು ಭೇಟಿಯಾಗಿ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಬೇಕೆಂದು, ಅದಕ್ಕೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಅಧಿಕಾರಿಗಳಿಗೆ ಹೇಳಿದ್ದೇನೆ. ಆ ಪ್ರಕಾರ ವ್ಯವಸ್ಥೆ ಮಾಡುವುದಕ್ಕೆ ಅಧಿಕಾರಿಗಳಿಗೆ ಹೇಳುತ್ತೇನೆ.

ಅಧ್ಯಕ್ಷರು.—ಈಗ ಶಾಸನ ರಚನೆ.